**ಸಾಕ್ಷಿಗೆ ದಿನಾಂಕ:30-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಮುಖ್ಯ ವಿಚಾರಣೆ :: ಪ್ರತಿವಾದಿ ಪರ ಶ್ರೀ. GVK ವಕೀಲರಿಂದ ::**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರವನ್ನು ಈಗಾಗಲೇ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸರಿಯಾಗಿದ್ದು, ನಾನೇ ಓದಿ ತಿಳಿದು ಸಹಿ ಮಾಡಿರುತ್ತೇನೆ.

ಮುಂದುವರೆದು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| Sl.No. | Documents | Exhibits |
|---|---|---|
| 1 | ದಿ: 07.03.2017 ರ ಒಂದು ನೋಂದಾಯಿತ ಕ್ರಯದ ಒಪ್ಪಂದ ಕರಾರು ಪತ್ರ | Ex.D-1 |
| 2 | 3 ಪೋಟೋಗಳು | Ex.D-2 ರಿಂದ 4 |

ಆದುದರಿಂದ ಪ್ರತಿವಾದ ಪತ್ರದಲ್ಲಿ ಕೋರಿಕೊಂಡಂತೆ ದಾವೆಯನ್ನು ವಜಾ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**:: ಪಾಟೀಸವಾಲು :: ವಾದಿ ಪರ ಶ್ರೀ TLP ವಕೀಲರಿಂದ ::**

ನನ್ನ ಗಂಡನ ಹೆಸರು ಮಂದಣ್ಣ ಆಗಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತನ್ನು ಸರ್ಕಾರದಿಂದ ನನ್ನ ಗಂಡನಿಗೆ ಮಂಜೂರು ಮಾಡಲಾಗಿತ್ತು ಎಂದರೆ ಸರಿ. ನನಗೆ ಸವಿತಾ ಕವಿತಾ ಪವಿತಾ ಎನ್ನುವ ಮೂರು ಜನ ಹೆಣ್ಣು ಮಕ್ಕಳು ಮತ್ತು ಸುಬ್ಬಯ್ಯ ಎನ್ನುವ ಗಂಡು ಮಗ ಇರುತ್ತಾರೆ ಎಂದರೆ ಸರಿ. ನನ್ನ ಗಂಡ ಮೃತರಾದ ನಂತರದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ನಮ್ಮ ನಾಲ್ಕು ಜನ ಮಕ್ಕಳ ಹೆಸರಿನಲ್ಲಿ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೇವಲ ನನ್ನ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನನ್ನ ಮಕ್ಕಳು ಎಲ್ಲರಿಗೂ ಸಹ ಸಮಾನದ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಸದರಿ ಸ್ವತ್ತು ನನ್ನ ಗಂಡನ ಸ್ವತ್ತಾದ ಕಾರಣ ನನಗೆ ಮಾತ್ರ ಹಕ್ಕು ಇರುತ್ತದೆ

ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ನನ್ನ ಮಕ್ಕಳ ಅನುಮತಿ ಇಲ್ಲದೇ ಭುವನೇಶ್ವರ್ ಎನ್ನುವವರಿಗೆ ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ನಿಡಿ1 ರಂತೆ ಕ್ರಯದ ಒಪ್ಪಂದ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಸಮಯದಲ್ಲಿ ನನಗೆ ಹುಷಾರಿಲ್ಲದ ಕಾರಣ ಮತ್ತು ನನ್ನ ಹೆಣ್ಣು ಮಕ್ಕಳು ಯಾರು ನೋಡಿಕೊಳ್ಳದ ಕಾರಣ ನಿಡಿ1 ನ್ನು ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ1 ಕ್ಕೆ ಸಂಬಂಧಪಟ್ಟಂತೆ ಭುವನೇಶ್ವರ್ ರವರಿಂದ ನಾನು ಮಾರಾಟದ ಸಂಪೂರ್ಣ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ.

ನಿಡಿ1 ಕ್ಕೆ ವಾದಿ ಅಥವಾ ಅವರ ತಾಯಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯ ತಾಯಿ ಆ ಸಮಯದಲ್ಲಿ ತೀರಿಕೊಂಡಿದ್ದರು ಎಂದು ನುಡಿಯುತ್ತಾರೆ. ವಾದಿಯ ತಾಯಿಯ ಹಿಸ್ಸೆ ವಾದಿಗೆ ಕಾನೂನಿನ ರೀತಿ ಹೋಗಬೇಕು ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತನ್ನು ನನ್ನ ಗಂಡನಿಗೆ ಮಂಜೂರು ಮಾಡುವ ಸಮಯದಲ್ಲಿ 15 ವರ್ಷ ಯಾರಿಗೂ ಮಾರಾಟ ಮಾಡಬಾರದೆಂದು ನಿಬಂದನೆ ಇತ್ತು ಎಂದರೆ ಸರಿ. ಮೇಲೆ ಹೇಳಿದ 15 ವರ್ಷ ಇನ್ನು ಮುಕ್ತಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಿಬಂದನೆ ಇದ್ದರೂ ಸಹ ನಾನು ನಿಡಿ1 ನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ವಾದಿಗೆ ಕೊಡಬೇಕಾದ ಹಿಸ್ಸೆಯನ್ನು ತಪ್ಪಿಸುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: